## ಕಳೆದ ಸಂಚಿಕೆಯಲ್ಲಿ...



ದಾರಿಯಲ್ಲಿ ಎಡತಾಕಿದ ಅಸಹಾಯಕ ಮಹಿಳೆ ಪಾಲ್ ಪಾಲಿಗೆ ಅನ್ನಪೂರ್ಣೆಯಾದಳು. ಪಾಲ್‌ನಿಂದ ಹಣದ ನೆರವು ಪಡೆಯಲು ಸ್ವಾಭಿಮಾನಿಯಾದ ಆ ಹೆಣ್ಣು ಒಪ್ಪಲಿಲ್ಲ. ಹಸಿವೆಯನ್ನು ತಣಿಸಿದ ಮಹಿಳೆಯನ್ನು ಹರಸಿದ ಪಾಲ್ ಪಯಣ ಮುಂದುವರೆಸಿದ. ಅಪರಿಚಿತ ವ್ಯಕ್ತಿಗಳು ಯಾವ ಕಾರಣವೂ ಇಲ್ಲದೆ ವ್ಯಕ್ತಪಡಿಸುವ ಪ್ರೀತಿಯನ್ನು ಕಂಡು ಪಾಲ್‌ಗೆ ಅಚ್ಚರಿಯಾಯಿತು. ಅವನಿಗೆ ನೀನಾಳ ಕೊನೆಯ ದಿನಗಳು ನೆನಪಾದವು. ಪೀಟರ್ ಇದ್ದಕ್ಕಿದ್ದಂತೆ ಆತ್ಮಹತ್ಯೆ ಮಾಡಿಕೊಂಡಿದ್ದ. ದೃಢಕಾಯ ಹಾಗೂ ಸುಂದರ ಪೀಟರ್ ಯಾವ ಸುಳಿವನ್ನೂ ಬಿಟ್ಟುಕೊಡದೆ ಮರಕ್ಕೆ ನೇಣು ಹಾಕಿಕೊಂಡಿದ್ದ. ಕ್ಯಾನ್ಸರ್‌ನಿಂದ ಕಂಗೆಟ್ಟಿದ್ದ ನೀನಾ ಮತ್ತಷ್ಟು ಕುಸಿದಳು. ಆದರೆ, ಪೀಟರ್‌ನ ಸಾವಿನಿಂದಾಗಿ ನೀನಾ ಮತ್ತು ಪಾಲ್ ಭೇಟಿಗಿದ್ದ ಏಕೈಕ ತಡೆಯೂ ಇಲ್ಲವಾಯಿತು. ಸಾಯುವ ಮುನ್ನ ಮಗಳ ಮದುವೆ ನೋಡಬೇಕೆನ್ನುವ ನೀನಾಳ ಆಸೆಯನ್ನು ಪೂರೈಸಲಿಕ್ಕಾಗಿ ಕರೀನಾ ಮದುವೆಗೆ ಸಿದ್ಧವಾದಳು.

ಎದುರು ನೀನಾಳಿಗೆ ತಿಳಿಯದಂತೆ, ‘ನನ್ನ ಹೆಂಡತಿ ಕೇಂಬ್ರಿಜ್‌ನಲ್ಲಿ ಓದಿದ್ದಾಳೆ, ಅವಳು ಒಳ್ಳೆಯ ಹುದ್ದೆಯಲ್ಲಿದ್ದಾಳೆ’ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದೆ. ನೀನಾಳ ಎದುರು ಇದನ್ನೇ ವಿಷಯ ಮಾಡಿಕೊಂಡು ಅವಳಿಗೆ ಚುಚ್ಚು ಮಾತುಗಳನ್ನು ಹೇಳುತ್ತಿದ್ದೆ. ಇದು ನನ್ನ ದ್ವಿಮುಖ ಮಾನಸಿಕತೆಯಾಗಿತ್ತು. ನನ್ನ ಹೆಂಡತಿಯ ಯಾವ ವಿಶೇಷತೆಗಳನ್ನು ಅವಳ ಬೆನ್ನ ಹಿಂದೆ ಹೇಳುತ್ತಿದ್ದೆನೋ, ಅವುಗಳನ್ನು ಒಪ್ಪಿಕೊಳ್ಳಲು ನನ್ನ ಅಹಂಕಾರ ಅಡ್ಡಿಯಾಗುತ್ತಿತ್ತು.

‘ನನಗೆ ಫಸ್ಟ್ ಕ್ಲಾಸ್ ರೋಗ ತಗುಲಿದೆ...’ ನೀನಾ ಮುಗುಳ್ನಗೆಯಿಂದ ಹೇಳುತ್ತಿದ್ದಳು. ಅವಳಿಗೆ ಕ್ಯಾನ್ಸರ್ ತಗುಲಿತ್ತು. ನಾನು ಅವಳನ್ನು ಎದುರಿಸಲು ಸಾಧ್ಯವಾಗುತ್ತಿರಲಿಲ್ಲ.

ಫಸ್ಟ್ ಕ್ಲಾಸ್ ರೋಗ, ಫಸ್ಟ್ ಕ್ಲಾಸ್ ಅಂತ್ಯ ಸಂಸ್ಕಾರ. ನನ್ನ ಮನಸ್ಸಿಗೆ ಅತ್ಯಂತ ದುಃಖವಾಯಿತು. ನಾನು ಹೇಳಿದ ನನ್ನ ಕಹಿ ಮಾತುಗಳನ್ನು ಮರಳಿ ಪಡೆಯುವಂತಿದ್ದರೆ, ಒಂದು ವೇಳೆ ನನಗೆ ನೀನಾಳ ಜೀವನ ಇಷ್ಟು ಚಿಕ್ಕದಾಗುವುದೆಂದು ತಿಳಿದಿದ್ದರೆ, ನಾನೆಂದೂ ಅವಳಿಗೆ ಆಘಾತವಾಗುವಂತೆ ವರ್ತಿಸುತ್ತಿರಲಿಲ್ಲ.

‘ನನ್ನ ಮಮ್ಮಿಗೆ ಥರ್ಡ್ ಕ್ಲಾಸ್ ಹಸ್ಬೆಂಡ್ ಸಿಕ್ಕರು...’ ಎಂದು ಜೊಹಾನಾ ಹೇಳುತ್ತಿದ್ದಳು.

### ಸಾವು ಕೊನೆಯ ಶತ್ರು

ನೀನಾಳ ಅದೃಷ್ಟದಲ್ಲಿ ಯಾವ ಯಾವ ಯಾತನೆಗಳು ಬರೆದಿದ್ದವೋ ಎಂದು ಯೋಚಿಸಿದಾಗ ನನಗೆ ತುಂಬಾ ದುಃಖವಾಗುತ್ತದೆ. ಅವಳ ಕೊನೆ ಹೀಗಾಗುವುದಿತ್ತು. ಅವಳು ಮೊದಲು ಏನಾಗಿದ್ದಳು, ಈಗ ಏನಾಗಿದ್ದಾಳೆ! ಓರ್ವ ಸುಂದರ, ಸ್ಫೂರ್ತಿಯುಳ್ಳ, ಆತ್ಮವಿಶ್ವಾಸದ ಮಹಿಳೆಯಿಂದ, ಓರ್ವ ದುರ್ಬಲ, ಭಯಭೀತ ಮತ್ತು ಕುರೂಪ ಮಹಿಳೆಯಾಗಿದ್ದಳು. ಅವಳ ತಲೆಯ ಕೂದಲುಗಳು ಉದುರಿದ್ದವು. ರೇಡಿಯೇಶನ್‌ನಿಂದಾಗಿ ಚರ್ಮ ಕಪ್ಪಗಾಗಿತ್ತು. ಟ್ಯೂಮರ್ ದೊಡ್ಡದಾಗಿ ಎರಡು ತಲೆಯಂತೆ ಕಾಣುತ್ತಿತ್ತು. ಅವಳನ್ನು ನೋಡಿದರೆ ಭಯವಾಗುತ್ತಿತ್ತು, ಅಷ್ಟು ವಿಚಿತ್ರವಾಗಿದ್ದಳು. ಅವಳು ಈಗ ತನ್ನ ಸಹಿ ಮಾಡುವ ಪರಿಸ್ಥಿತಿಯಲ್ಲೂ ಇರಲಿಲ್ಲ. ನಂತರದಲ್ಲಿ ಮಹತ್ವದ ಕಾಗದ ಪತ್ರಗಳಿಗೆ ಅವಳಿಂದ ಹೆಬ್ಬೆಟ್ಟಿನ ರುಜುವನ್ನು ತೆಗೆದುಕೊಳ್ಳಲಾಗುತ್ತಿತ್ತು. ಕೇಂಬ್ರಿಜ್‌ನಲ್ಲಿ ಅಧ್ಯಯನ ಮಾಡಿದ ಯುವತಿ ತನ್ನ ಜೀವನದ ಕೊನೆಯ ಸಮಯದಲ್ಲಿ ಕಾಗದಪತ್ರಗಳಿಗೆ ಹೆಬ್ಬೆರಳನ್ನು ಒತ್ತುತ್ತಿದ್ದಳು. ಇದು ಜೀವನದ ನಿಯತಿಯಾಗಿದೆ!

ಎಷ್ಟೊಂದು ಬೀಭತ್ಸ! ಛಿ...

ಆಸ್ಪತ್ರೆ ನೀನಾಳ ಚಿಕಿತ್ಸೆಯನ್ನು ಒಂದು ಹಂತದವರೆಗೆ ಮಾಡಿತು. ಟ್ಯೂಮರ್ ಮೇರುದಂಡವನ್ನು ಸಂಪೂರ್ಣವಾಗಿ ಆವರಿಸಿದಾಗ ರೇಡಿಯೊಥೆರಪಿ ಮತ್ತು ಕಿಮೋಥೆರೆಪಿಗಳು ಅನುಪಯುಕ್ತವಾದವು. ಚಿಕಿತ್ಸೆಗಳೆಲ್ಲವೂ ನಿಂತವು. ಅವಳ ಶರೀರ ಈ ಚಿಕಿತ್ಸೆಗಳನ್ನು ಸಹಿಸುವ ಸಾಮರ್ಥ್ಯವನ್ನು ಕಳೆದುಕೊಂಡಿತ್ತು.

ಕಡೆಗೆ ನೀನಾಳನ್ನು ‘ಹೋಸ್ಪೈಸ್’ನಲ್ಲಿಡಲಾಯಿತು; ಅದು ಸಾವಿನ ಸಮೀಪಕ್ಕೆ ಬಂದ ವ್ಯಕ್ತಿಗಳ ಶುಶ್ರೂಷೆಯನ್ನು ಮಾಡುವ ವಿಶೇಷ ಆಸ್ಪತ್ರೆಯಾಗಿತ್ತು. ನೀನಾ ಒಂದು ಹಳೆಯ ಬಟ್ಟೆಯ ಗಂಟಿನಂತೆ ಹಾಸಿಗೆಯಲ್ಲಿ ನಿರ್ಜೀವವಾಗಿ ಮಲಗಿರುತ್ತಿದ್ದಳು. ಅವಳ ಶರೀರ ತನ್ನ ಸಮತೋಲನ, ಸಮನ್ವಯ, ಉದ್ದೇಶ ಹಾಗೂ ತನ್ನ ಸುತ್ತಮುತ್ತಲಿನ ಅನುಭವಗಳನ್ನು ಕಳೆದುಕೊಂಡಿತ್ತು.

ನಾನು ನಿಯಮಿತವಾಗಿ ಅವಳನ್ನು ಭೇಟಿಯಾಗಲು ಮೊದಲು ಆಸ್ಪತ್ರೆಗೆ ಹೋಗುತ್ತಿದ್ದೆ; ಅವಳು ಹೋಸ್ಪೈಸ್‌ಗೆ ಶಿಫ್ಟ್ ಆದಾಗ ಹೋಸ್ಪೈಸ್‌ಗೆ ಹೋಗುತ್ತಿದ್ದೆ. ಸಾಮಾನ್ಯವಾಗಿ ಅವಳ ತಾಯಿ ಶೀಲಾ ದೇವಿಯವರೇ ಅವಳ ಬಳಿ ಕಾಣಬರುತ್ತಿದ್ದರು. ಒಮ್ಮೊಮ್ಮೆ ಕರೀನಾ ಮತ್ತು ಜೊಹಾನಾ ಸಹ ಅವಳ ಬಳಿ ಇರುತ್ತಿದ್ದರು.

ಅಂದು ನಾನು ಹೋಸ್ಪೈಸ್‌ಗೆ ಹೋದಾಗ ಎಂದಿನಂತೆ ಶೀಲಾ ದೇವಿ ನೀನಾಳ ಬಳಿ ಕೂತಿದ್ದರು. ನಾನು ಅವರನ್ನು ಅಭಿನಂದಿಸಿ ಕೇಳಿದೆ, ‘ನೀವು ಹೇಗಿದ್ದೀರ?’

ಅವರು ನೀನಾಳನ್ನು ನೋಡುತ್ತಾ ಹೇಳಿದರು, ‘ಹೇಗಿರೋದು? ಇನ್ನು ಕಾಯುವುದೊಂದೇ ಉಳಿದಿದೆ...’

ನೀನಾ ಸಾವಿನ ಹಾದಿಯಲ್ಲಿದ್ದಳು. ನಾನು ಅವಳೊಂದಿಗೆ ಬಹಳಷ್ಟು ಪ್ರವಾಸಗಳನ್ನು ಮಾಡಿದ್ದೆ. ಆದರೆ ಈ ಯಾತ್ರೆಯನ್ನು ಅವಳು ಸ್ವತಃ ಮಾಡಬೇಕಿತ್ತು. ಹಾಂ, ಅವಳ ಕೊನೆಯ ಸಮಯ ಬಂದಾಗ ಅವಳ ಪತಿಯಾದ ನಾನೇ ಅವಳ ಬಳಿಯಿದ್ದೆ.

‘ಪಾಲ್, ನೀನಿಲ್ಲಿ ನೀನಾಳ ಬಳಿ ಸ್ವಲ್ಪ ಹೊತ್ತು ಇರ್ತೀಯ? ನಾನು ಸ್ವಲ್ಪ ಮನೆಗೆ ಹೋಗಿ ಬರ್ತೀನಿ...’ ನನ್ನನ್ನು ನೋಡಿ ಶೀಲಾ ದೇವಿಯವರು ಹೇಳಿದ್ದರು.

‘ಆಗ್ಲಿ, ನೀವು ಮನೆಗೆ ಹೋಗಿ, ವಿಶ್ರಾಂತಿ ಪಡೆಯಿರಿ. ನಾನಿಲ್ಲಿ ಒಂದೂವರೆಎರಡು ಗಂಟೆಗಳ ಕಾಲ ಇರ್ತೀನಿ...’ ನಾನು ಅವರಿಗೆ ಭರವಸೆ ಕೊಟ್ಟೆ. ಶೀಲಾ ದೇವಿಯವರು ತಮ್ಮ ಮಗಳ ಸೇವೆಯನ್ನು ಮಾಡುತ್ತಾ ತುಂಬಾ ದಣಿದಿರುತ್ತಿದ್ದರು; ಅವರನ್ನು ನೋಡಿದಾಗ ಅವರ ಆರೋಗ್ಯ ಸಹ ಹದಗೆಟ್ಟಿದೆ ಎಂದು ತೋರುತ್ತಿತ್ತು.

‘ಇಂದು ಬೆಳಿಗ್ಗೆಯಿಂದ ಅವಳ ಆರೋಗ್ಯ ಸರಿಯಿಲ್ಲ’ ಶೀಲಾ ದೇವಿಯವರು ಕಳವಳದಿಂದ ಹೇಳಿದರು. ನಾನು ನೀನಾಳನ್ನು ನೋಡಿದೆ. ಅವಳ ಕಣ್ಣುಗಳು ಮುಚ್ಚಿದ್ದವು, ರಕ್ತನಾಳಗಳಿಗೆ ಗ್ಲೂಕೋಸ್ ಹೋಗುತ್ತಿತ್ತು. ಅವಳು ವೆಂಟಿಲೇಟರ್‌ನಲ್ಲಿದ್ದಳು. ನಾನು ಅವಳ ಕೈ ಹಿಡಿದು, ‘ನೀನಾ ನೀನಾ’ ಎಂದು ಕರೆದೆ.

ಅವಳು ಮೆಲ್ಲನೆ ತನ್ನ ಕಣ್ಣುಗಳನ್ನು ತೆರೆದು ಅರೆಮುಚ್ಚಿದ ದೃಷ್ಟಿಯಿಂದ ಕೆಲವು ಕ್ಷಣ ನನ್ನನ್ನು ನೋಡಿ, ಮತ್ತೆ ಕಣ್ಣುಗಳನ್ನು ಮುಚ್ಚಿಕೊಂಡಳು. ಈ ಮೂಲಕ ತನಗೆ ನನ್ನ ಉಪಸ್ಥಿತಿಯ ಅರಿವಿದೆ ಎಂಬುದನ್ನು ಸೂಚಿಸಿದಳು. ನಾನು ನೀನಾಳೊಂದಿಗೆ ಎರಡು ಗಂಟೆಗಳ ಕಾಲ ಕೂತಿದ್ದೆ. ಅವಳು ಕಣ್ಣುಗಳನ್ನು ಮುಚ್ಚಿಕೊಂಡು ಮೌನವಹಿಸಿ ಮಲಗಿದ್ದಳು. ನರ್ಸ್ ಎರಡು ಮೂರು ಬಾರಿ ಬಂದು ಡ್ರಿಪ್ ಮತ್ತು ವೆಂಟಿಲೇಟರ್ ಚೆಕ್ ಮಾಡಿ, ಅವಳ ಜ್ವರ ಮತ್ತು ಬ್ಲಡ್ ಪ್ರೆಷರ್ ಪರೀಕ್ಷಿಸಿದಳು. ನಾನು ರಾತ್ರಿ ಒಂಬತ್ತೂವರೆಗೆ ಅವಳ ಕೈಯನ್ನು ಒತ್ತಿ, ಅವಳನ್ನು ಆಲಿಂಗಿಸಿ ಹೊರಟು ಹೋದೆ.

ನಾನು ಹೋದ ಅರ್ಧ ಗಂಟೆಯ ನಂತರ ನೀನಾಳ ಪರಿಸ್ಥಿತಿ ಬಿಗಡಾಯಿಸಿತು. ನರ್ಸ್ ಅವಳ ತಾಯಿ ಶೀಲಾ ದೇವಿಗೆ ಫೋನ್ ಮಾಡಿದಳು, ತಾಯಿ ತನ್ನ ಮಕ್ಕಳಿಗೆ ಫೋನ್ ಮಾಡಿದರು. ನೀನಾಳ ತಂದೆತಾಯಿ ಮತ್ತು ಅವಳ ಚಿಕ್ಕ ಮಗಳು ಜೊಹಾನಾ ಹೋಸ್ಪೈಸ್‌ಗೆ ಬಂದರು. ಜೊಹಾನಾ ನನಗೂ ವಿಷಯ ತಿಳಿಸಿದಳು. ನಾನು ಏದುಸಿರು ಬಿಡುತ್ತಾ ಹೋಸ್ಪೈಸ್‌ಗೆ ಬಂದೆ. ನೀನಾ ಕೊನೆ ಉಸಿರೆಳೆದಿದ್ದಳು. ಈಗ ಅವಳ ಶವವನ್ನು